ಓ.ಎಸ್.ನಂಃ 58/2021

ಪಿಡಬ್ಲ್ಯೂ-2

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 29.01.2025 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಶ್ರೀ ಪಿ ಎಸ್ ಜಿ ವಕೀಲರಿಂದಃ**

ನನಗೆ ದಾವ ಆಸ್ತಿಯ ಮೂಲ ಸರ್ವೇ ನಂಬರ್ ನೆನಪಿಲ್ಲ. ದಾವ ಆಸ್ತಿಯ ಚೆಕ್ಕುಬಂಧಿ ಪೂರ್ವಕ್ಕೆ ಸರ್ಕಾರಿ ಹಳ್ಳ, ಪಶ್ಚಿಮಕ್ಕೆ ಸರ್ವೇ ನಂಃ 173 ಆಸ್ತಿ, ಉತ್ತರಕ್ಕೆಃ ನನಗೆ ಗೊತ್ತಿಲ್ಲ, ದಕ್ಷಿಣಕ್ಕೆಃ ಸರ್ವೇ ನಂಃ 142/2 ಆಸ್ತಿ ಇರುತ್ತದೆ. ದಾವ ಆಸ್ತಿಯ ಉತ್ತರಕ್ಕೆ ಸಬೀರ್ ರವರ ಆಸ್ತಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವ ಆಸ್ತಿಯ ಉತ್ತರಕ್ಕೆ ಸರ್ವೇ ನಂಃ 170 ಆಸ್ತಿ ಇದೆ ಎಂದರೆ ಸರಿಯಲ್ಲ. ನಾನು ಸಬೀರ್ ರವರು ವಿರುದ್ಧ ಅಸಲು ದಾವೆ 14/2021 ರ ದಾವೆಯ ಆಸ್ತಿ ಸರ್ವೇ ನಂಃ 170 ಗೆ ಸಂಬಂಧಪಟ್ಟಂತೆ ಹೂಡಿರುತ್ತೇನೆ ಎಂದರೆ ಸರಿ. 1ನೇ ಪ್ರತಿವಾದಿ ನಾಗಪ್ಪ ರವರ ಮಗ ಎಂದರೆ ಸರಿ. 2 ರಿಂದ 3ನೇ ಪ್ರತಿವಾದಿಗಳು 1ನೇ ಪ್ರತಿವಾದಿ ಹೆಂಡತಿ ಮತ್ತು ಮಕ್ಕಳು ಎಂದರೆ ಸರಿ. ದಾವ ಆಸ್ತಿಯು 1960 ರಲ್ಲಿ ಮಂಜೂರಾಗಿರುತ್ತದೆ. ನಾನು ಮಂಜೂರಾತಿ ಪತ್ರವನ್ನು ನ್ಯಾಯಾಲಯ ಹಾಜರು ಮಾಡಿರುವುದಿಲ್ಲ. ನಾನು ದಾವ ಆಸ್ತಿಯನ್ನು ಖರೀದಿ ಮಾಡುವ ಮೊದಲು ಅಳತೆ ಮತ್ತು ಸರ್ವೇ ಮಾಡಿಸಿ ಖರೀದಿ ಮಾಡಿರುತ್ತೇನೆ. ನಾನು ಯಾವ ವರ್ಷದಲ್ಲಿ ದಾವ ಆಸ್ತಿಯನ್ನು ಅಳತೆ ಮತ್ತು ಸರ್ವೇ ಮಾಡಿಸಿದ್ದೇನೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಆದರೆ ಅದಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ.

ದಾವ ಆಸ್ತಿಯನ್ನು ಅಳತೆ ಮತ್ತು ಸರ್ವೇ ಮಾಡಿಸುವ ಮೊದಲು ಹಾಜುಬಾಜುದಾರರಿಗೆ ನೋಟೀಸು ನೀಡಿರುತ್ತೇನೆ. ಕೋವಿಡ್ ಸಾಂಕ್ರಮಿಕ ಕಾಯಿಲೆ ಅವಧಿ ಮುಗಿದ ನಂತರ ನಾನು ನಮ್ಮ ಊರಿಗೆ ಬಂದಾಗ ದಾವ ಆಸ್ತಿಯು ಒತ್ತುವರಿ ಆಗಿರುವ ಬಗ್ಗೆ ನನಗೆ ತಿಳಿಯಿತು. ದಾವ ಆಸ್ತಿಯಲ್ಲಿ ಒತ್ತುವರಿ ಆಗಿರುವುದಕ್ಕೆ ಸಂಬಂಧಪಟ್ಟಂತೆ ನಾನು

ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ದಾವ ಆಸ್ತಿಯನ್ನು ಖರೀದಿ ಮಾಡಿರುವ ಕ್ರಯ ಪತ್ರದಲ್ಲಿ ನಾನು ವಾದ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂಧಿ ಇರುತ್ತದೆ. ನಾನು ದಾವ ಆಸ್ತಿಯನ್ನು ಸಾವಯುವ ವ್ಯವಸಾಯ ಮಾಡಲು ಖರೀದಿ ಮಾಡಿರುತ್ತೇನೆ. ನಾನು ಹೊಂಗಹಳ್ಳಿ ಗ್ರಾಮದಲ್ಲಿ ಸುಮಾರು 38–40 ಎಕರೆಯನ್ನು ಸಾವಯುವ ವ್ಯವಸಾಯ ಮಾಡಲು ಖರೀದಿ ಮಾಡಿರುತ್ತೇನೆ. ನಾನು ಕೊನೆಯದಾಗಿ 2019 ರಲ್ಲಿ ಆಸ್ತಿಯನ್ನು ಸಾವಯುವ ವ್ಯವಸಾಯ ಮಾಡಲು ಹೊಂಗಹಳ್ಳಿಯಲ್ಲಿ ಖರೀದಿ ಮಾಡಿರುತ್ತೇನೆ. ಆದರೆ ನಿಖರವಾದ ದಿನಾಂಕ ನನಗೆ ನೆನಪಿಲ್ಲ. ನಾನು ಸಾವಯುವ ವ್ಯವಸಾಯ ಮಾಡಲು ಅಬ್ದುಲ್ ಅಮೀದ್ ಮತ್ತು ಚಂದ್ರಚೂಡ ರವರ ಹತ್ತಿರ ಖರೀದಿ ಮಾಡಿರುತ್ತೇನೆ. ನಾನು 2019 ಕ್ಕಿಂತ ಮೊದಲು ಖರೀದಿ ಮಾಡಿರುವ ಆಸ್ತಿಯಲ್ಲಿ ಮನೆಯನ್ನು ಕಟ್ಟಿರುತ್ತೇನೆ ಎಂದರೆ ಸರಿ. ನಮ್ಮ ಆಸ್ತಿಗಳನ್ನು ನಿರ್ವಹಣೆ ಮಾಡಲು ಹರಾಬ್ ಮತ್ತು ಇತರೆ ನೌಕರರನ್ನು ನೇಮಕ ಮಾಡಿರುತ್ತೇನೆ ಎಂದರೆ ಸರಿ. ಅವಶ್ಯಕತೆ ಇದ್ದಾಗ ನಾನು ಸಹ ಅಲ್ಲಿಗೆ ಹೋಗುತ್ತೇನೆ. ನಾನು ಖರೀದಿ ಮಾಡಿರುವ ಆಸ್ತಿಗಳಿಗೆ ಬೇಲಿ ಹಾಕಿರುತ್ತೇನೆ ಎಂದರೆ ಸರಿ. ಆದರೆ ಪೂರ್ಣವಾಗಿ ಬೇಲಿ ಹಾಕಿರುವುದಿಲ್ಲ ಮತ್ತು ರಸ್ತೆಯನ್ನು ಸಹ ಮಾಡಿರುತ್ತೇನೆ.

ದಾವ ಆಸ್ತಿಯ ಮೂಲ ಸರ್ವೇ ನಂಃ 78 ಎಂದರೆ ನನಗೆ ಗೊತ್ತಿಲ್ಲ. ಮಾದಪ್ಪರವರಿಗೆ ಯಾವ ಸರ್ವೇ ನಂಬರ್ ನಲ್ಲಿ ಆಸ್ತಿ ಮಂಜೂರಾಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ದಾವ ಆಸ್ತಿಯು ಮೂಲತಃ ಮಾದಪ್ಪ ರವರಿಗೆ ಸೇರಿದ್ದು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ದಾವ ಆಸ್ತಿಯು ಮೂಲತಃ 1ನೇ ಪ್ರತಿವಾದಿ ತಂದೆಗೆ ದಿಃ12.05.1961 ರಂದು ಮಂಜೂರಾಗಿರುತ್ತದೆ ಎಂದರೆ ಸರಿ. ಮಂಜೂರಾದ ನಂತರ ಅವರ ಹೆಸರಿಗೆ ಖಾತೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. 1ನೇ ಪ್ರತಿವಾದಿ ಜೀವಂತ ಇರುವಾಗಲೇ ಅವರೇ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. 1ನೇ ಪ್ರತಿವಾದಿ ತಂದೆ

ತೀರಿಕೊಂಡ ನಂತರ ಅವರ ಮಗ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಃ 142 ನಲ್ಲಿ 3 ಎಕರೆ 27 ಗುಂಟೆಯನ್ನು 1 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮಾದಪ್ಪರವರು ದಾವ ಆಸ್ತಿಯ ಮೇಲೆ ಯಾವುದೇ ಮಾಲೀಕತ್ವ ಇರುವುದಿಲ್ಲ, ಆದ್ದರಿಂದ ಅವರಿಗೆ ಮಾರಾಟ ಮಾಡುವ ಹಕ್ಕು ಸಹ ಇಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿರುವ ಕ್ರಯ ಪತ್ರದಲ್ಲಿ ದಾವ ಆಸ್ತಿಯು ಮಾದಪ್ಪ ರವರಿಗೆ ಮಂಜೂರಾಗಿರುತ್ತದೆ ಎಂದು ನಮೂದು ಇದೆಯೋ ಅಥವಾ ಇಲ್ಲವೂ ನನಗೆ ಗೊತ್ತಿಲ್ಲ. ದಾವ ಆಸ್ತಿಯು ಪ್ರತಿವಾದಿಗಳಿಗೆ ಸೇರಿದ ಆಸ್ತಿಯಾಗಿದ್ದು ಮಾದಪ್ಪರವರಿಗಾಗಲೀ ಅಥವಾ ನನಗಾಗಲೀ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಮರೀಗೌಡ ರವರ ಬಗ್ಗೆ ನನಗೆ ಗೊತ್ತಿಲ್ಲ.

ಸುಳ್ಳು ರೆವಿನ್ಯೂ ದಾಖಲೆಗಳ ಮೇಲೆ ದಾವ ಆಸ್ತಿಗಳ ಮೇಲೆ ಸುಳ್ಳು ದಾಖಲೆ ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವ ಆಸ್ತಿಯ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳ ಆಧಾರದ ಮೇಲೆ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ಕ್ರಯ ಪತ್ರವು ಕಾನೂನಿಕ ಪ್ರಕಾರ ಊರ್ಜಿತವಲ್ಲ ಎಂದರೆ ಸರಿಯಲ್ಲ. ನನ್ನ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಎ.ಎನ್.ಕಾಂತಮ್ಮ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ